**ದಿನಾಂಕಃ 30.04.2026** ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟೀ ಸವಾಲುಃ 3 ನೇ ಎದುರುದಾರರ ಪರ ಶ್ರೀ.ಡಿ.ಎಚ್.ಪಿ. ವಕೀಲರಿಂದಃ</u>**

ಅಪಘಾತ ನಡೆಯುವ ದಿನ ಹಿರಿಯೂರಿನಿಂದ ಬೆಂಗಳೂರಿಗೆ ಕೆ.ಎಸ್.ಆರ್.ಟಿ.ಸಿ. ಬಸ್ಸಿನಲ್ಲಿ ಹೋಗುತ್ತಿರುತ್ತೇನೆ. ಬಸ್ಸಿನಲ್ಲಿ ಪ್ರಯಾಣ ಮಾಡುವ ಬಗ್ಗೆ ಟಿಕೇಟನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ಬಸ್ಸಿನ ಹಿಂಬದಿಯ 3 ನೇ ಸೀಟಿನಲ್ಲಿ ಕುಳಿತಿರುತ್ತೇನೆ. ಅಪಘಾತವು ಶಿರಾ ಬ್ರಿಡ್ಜ್ ಬಳಿ ಬೆಳಗ್ಗೆ 11.30 ಕ್ಕೆ ಆಗಿರುತ್ತದೆ. ನಾನು ಕುಳಿತುಕೊಂಡ ಬಸ್ಸಿನ ಮುಂಭಾಗದ ವಾಹನ ಕಾಣುತ್ತಿರುತ್ತದೆ. ಬಸ್ಸಿಗೂ ಮತ್ತು ಲಾರಿಗೂ ಎಷ್ಟು ಅಂತರ ಗೊತ್ತಿಲ್ಲ ಆದರೆ ಡಿಕ್ಕಿ ಹೊಡೆದಾಗ ಗೊತ್ತಾಗಿರುತ್ತದೆ. ಕೆ.ಎಸ್.ಆರ್.ಟಿ.ಸಿ. ಬಸ್ Indicator ಹಾಕಿರುತ್ತದೆ ಎಂದರೆ ಸರಿ. ಬಸ್ಸಿನಲ್ಲಿ 52 ಸೀಟುಗಳಲ್ಲು ಸಹ ಪ್ರಯಾಣಿಕರು ಇರುತ್ತಾರೆ. ನನಗೆ ಮತ್ತು ಇತರ 4 ಜನರಿಗೆ ಗಾಯವಾಗಿರುತ್ತದೆ. ಎನ್.ಎಚ್.48 ರ ರಸ್ತೆಯಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ ಮಧ್ಯದ ಲೇನ್ ನಲ್ಲಿ ಹೋಗುತ್ತಿತ್ತು. ಲಾರಿ ಸಹ ಮಧ್ಯದ ಲೇನ್ ಹೋಗುತ್ತಿತ್ತು. ಅಪಘಾತವು ಎಡ ಭಾಗದ ಲೇನ್ ನಲ್ಲಿ ಆಗಿರುತ್ತದೆ. ಕೆ.ಎಸ್.ಆರ್.ಟಿ.ಸಿ. ವಾಹನದ ಚಾಲಕ ಅತಿವೇಗ ಅಜಾಗರೂಕತೆಯಿಂದ ಚಾಲನೆ ಮಾಡಿ ಲಾರಿಗೆ ಡಿಕ್ಕಿ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಕೆ.ಎಸ್.ಆರ್.ಟಿ.ಸಿ. ಬಸ್ ಮತ್ತು ಲಾರಿ ಚಾಲಕರು ವಾಹನಗಳನ್ನು ಚಾಲನೆ ಮಾಡುವಾಗ ಅಂತರ ಕಾಪಾಡಿಕೊಳ್ಳದೆ ಇರುವುದರಿಂದ ಕೆ.ಎಸ್.ಆರ್.ಟಿ.ಸಿ. ಬಸ್ ಚಾಲಕನಿಂದ ಅಪಘಾತವಾಗಿರುತ್ತದೆ. ಬಸ್ ನ ಎಡಗಡೆ ಮತ್ತು ಲಾರಿಗೆ ಮತ್ತು ಬ್ರಿಡ್ಜ್ ಗೆ ಹೊಡೆದು ಜಖಂ ಆಗಿರುತ್ತದೆ. ಲಾರಿಗೆ ಸ್ವಲ್ಪ ಜಖಂ ಆಗಿರುತ್ತದೆ. ನಾನು ಮೂಗು, ಬುಜ ಮತ್ತು ಕಾಲಿಗೆ ಗಾಯಗಳಾಗಿ ಶಿರಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ನಾನು ಚಿತ್ರದುರ್ಗ ಆಸ್ಪತ್ರೆಯಲ್ಲಿ 3 ದಿನಗಳ ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ನನಗೆ ಶಸ್ತ್ರ ಚಿಕಿತ್ಸೆ ಆಗಿಲ್ಲ. ನನಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ನಂತರ ಎಲ್ಲಾ ವಾಸಿ ಆಗಿರುತ್ತದೆ ಎಂದರೆ ಸರಿ. ನಾನು ಎಂದಿನಂತೆ ಕೆಲಸ ಮಾಡುತ್ತೇನೆ ಎಂದರೆ ಸಾಕ್ಷಿಯು ಸ್ವಲ್ಪ ಬುಜ ನೋವುತ್ತದೆ ಎಂದು

ನುಡಿಯುತ್ತಾರೆ.  ನಾನು ಆಟೋ ಚಾಲಕ. ನನಗೆ ಮಾಸಿಕ ರೂ.20,000/- ಆಧಾಯ ಬರುತ್ತದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ನಾನು ಆಟೋ ಚಾಲನೆ ಪರವಾನಗಿ ನೀಡಿರುತ್ತೇನೆ.  ಕೆ.ಎಸ್.ಆರ್.ಟಿ.ಸಿ. ಬಸ್ ನ ಚಾಲಕನಿಂದ ಆದ ಅಪಘಾತಕ್ಕೆ 3 ನೇ ಎದುರುದಾರರು ಪರಿಹಾರ ಕೊಡಲು ಭಾದ್ಯರಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಹೆಚ್ಚುವರಿ ಹಿ.ಸಿ.ಜೆ. ಮತ್ತು ಎಂ.ಎ.ಸಿ.ಟಿ.
ಶಿರಾ.